ಅ) ತುಮಕೂರು ಜಿಲ್ಲೆಯಲ್ಲಿ 5481 ಸ್ತ್ರೀಶಕ್ತಿ ಗುಂಪುಗಳು ರಚನೆಯಾಗಿವೆ. ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ:

ತಾಲ್ಲೂಕಿನ ಹೆಸರು	ಗುಂಪುಗಳ ಸಂಖ್ಯೆ
1. ತುಮಕೂರು (ಗ್ರಾ)	713
2. ತುಮಕೂರು (ನ)	54
3. ಕೊರಟಗೆರೆ	329
4. ಪಾವಗಡ	554
5. ತುರುವೇಕೆರೆ	471
6. ಶಿರಾ	571
7. ಚಿಕ್ಕನಾಯ್ಕನಹಳ್ಳಿ	627
8. ತಿಪಟೂರು	517
9. ಕುಣಿಗಲ್	358
10. ಗುಬ್ಬಿ	662
11. ಮಧುಗಿರಿ	627
ಒಟ್ಟು:	**5481**

ಆ) ರಾಜ್ಯದಲ್ಲಿ ಒಟ್ಟು 56,841 ಗುಂಪುಗಳಿಗೆ ಸುತ್ತುನಿಧಿ ಬಿಡುಗಡೆ ಮಾಡಲಾಗಿದೆ. ಅದರಲ್ಲಿ ತುಮಕೂರು ಜಿಲ್ಲೆಗೆ ಒಟ್ಟು 2671 ಗುಂಪುಗಳಿಗೆ ಸುತ್ತುನಿಧಿ ನೀಡಲಾಗಿದೆ.

ಇ) ನಬಾರ್ಡ್ ನಿಗದಿ ಪಡಿಸಿರುವ ಅರ್ಹ ಮಾನದಂಡಗಳನ್ನು ಪೂರೈಸುವಂತಹ ಗುಂಪುಗಳಿಗೆ ಹಂತ ಹಂತವಾಗಿ ಸುತ್ತುನಿಧಿಯನ್ನು ನೀಡಲಾಗುತ್ತಿದೆ.

ಈ) ಉಳಿದಿರುವ ಸ್ತ್ರೀಶಕ್ತಿ ಗುಂಪುಗಳಿಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿಯೇ ಸುತ್ತುನಿಧಿ ನೀಡಲಾಗುವುದು.

ಉ) ಇಲ್ಲ. ಉದ್ಭವಿಸುವುದಿಲ್ಲ.

ತೋಟಗಾರಿಕಾ ರೈತರ ಸಮಸ್ಯೆಗಳು ಹಾಗೂ ಮಾರುಕಟ್ಟೆ ಸೌಲಭ್ಯ

640 (5420) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತೋಟಗಾರಿಕಾ ಬೆಳೆಗಳ ರೈತರು ಮಾರುಕಟ್ಟೆಗಳಲ್ಲಿ ಅನುಭವಿಸುತ್ತಿರುವ ಸಮಸ್ಯೆಗಳ ವಿವರ ನೀಡುವುದು;

ಆ) ರಾಷ್ಟ್ರದಲ್ಲಿ ತೋಟಗಾರಿಕೆಯ ಬೆಳೆಗಳ ರೈತರಿಗಾಗಿ ಇರುವ ಮಾದರಿ ಮಾರುಕಟ್ಟೆಗಳ ವಿವರ ನೀಡುವುದು;

ಇ) ವಿವಿಧ ತೋಟಗಾರಿಕೆಯ ಉತ್ಪನ್ನಗಳ ರಫ್ತು ಮಾಡುವ ಅವಕಾಶ ಗಮನಿಸಿ ರಾಜ್ಯದಲ್ಲಿ ವಿದೇಶಿ ತಂತ್ರಜ್ಞಾನ ಮತ್ತು ಉಪಕರಣಗಳ ಬಳಕೆಯ ಲಾಭ ರೈತರಿಗೆ ನೀಡಲಾಗುವುದೇ;

ಈ) ರಾಜ್ಯ ಕೇಂದ್ರ ಮತ್ತು ವಿವಿಧ ಸಂಸ್ಥೆಗಳ ಉತ್ಪನ್ನಗಳ ಲಾಭ ರೈತರಿಗೆ ದೊರಕಲು ಖಾಸಗೀ ಸಹಕಾರಿ ಸಂಸ್ಥೆಗಳಿಗೆ ಇರುವ ಯೋಜನೆಗಳ ವಿವರ ನೀಡುವುದು?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು):

ಅ) ಮಾರುಕಟ್ಟೆಗಳಲ್ಲಿನ ಸಮಸ್ಯೆಗಳು ಕೆಳಕಂಡಂತಿವೆ.

1. ಬೆಲೆ ಕುಸಿತ
2. ಮಾರುಕಟ್ಟೆಗಳ ಸಂಪೂರ್ಣ ಮಾಹಿತಿಯು ಲಭ್ಯವಿಲ್ಲದಿರುವುದು.
3. ಕೊಯ್ಲಿನ ನಂತರದ ನಿರ್ವಹಣೆಯ ಸಮಸ್ಯೆಗಳು
4. ಶೇಖರಣೆ ವ್ಯವಸ್ಥೆಯ ದೋಷಗಳು
5. ಸಂಸ್ಕರಣೆಯ ಅಭಿವೃದ್ಧಿಯಲ್ಲಿ ನಿಧಾನಗತಿ
6. ರಫ್ತು ಗುಣಮಟ್ಟದ ಉತ್ಪಾದನೆಯ ಕೊರತೆ.
7. ಇತರೇ ಮೂಲಭೂತ ಸೌಕರ್ಯಗಳ ಕೊರತೆ.

ಆ) ರಾಜ್ಯದಲ್ಲಿ ವಿವಿಧ 113 ಎ.ಪಿ.ಎಂ.ಸಿ.ಗಳಲ್ಲಿ ತೋಟಗಾರಿಕೆ ಉತ್ಪನ್ನಗಳ ಮಾರುಕಟ್ಟೆ ವ್ಯವಸ್ಥೆ ಇರುತ್ತದೆ. ವಿಶೇಷವಾಗಿ ಮೆಣಸಿನಕಾಯಿಗೆ ಬ್ಯಾಡಗಿ, ಅಡಿಕೆಗೆ ಮಂಗಳೂರು, ಕೊಬ್ಬರಿಗೆ ತಿಪಟೂರು ಹಾಗೂ ಬಾಳೆಗೆ ಬೆಂಗಳೂರಿನಲ್ಲಿರುವ ಬಿನ್ನಿಮಿಲ್ಲಿನ ಪ್ರಾಂಗಣಗಳು ಪ್ರಸಿದ್ಧವಾಗಿವೆ. ಹಾಪ್‌ಕಾಮ್ಸ್ ಸಂಸ್ಥೆಯು ತೋಟಗಾರಿಕೆ ಉತ್ಪನ್ನಗಳ ವಿಶೇಷ ಮಾರಾಟ ಸಂಸ್ಥೆಯಾಗಿದೆ.

ಇ) ಹೌದು. ರಫ್ತು ಗುಣಮಟ್ಟದ ಉತ್ಪನ್ನಗಳ ಬೇಸಾಯ ಮಾಡಲು ರೈತರಿಗೆ ಹನಿ ನೀರಾವರಿ, ಬೇಸಾಯ ಯಂತ್ರೋಪಕರಣಗಳು, ಸಾವಯವ ಬೇಸಾಯ, ಕಟಾವಿನ ನಂತರದ ನಿರ್ವಹಣೆ, ಸಂಸ್ಕರಣೆ ಸಸ್ಯ ಸಂರಕ್ಷಣೆ ಇತ್ಯಾದಿ ಉತ್ತಮ ತಂತ್ರಜ್ಞಾನದ ಲಾಭವನ್ನು ರೈತರಿಗೆ ಒದಗಿಸಲಾಗುತ್ತಿದೆ.

ಈ) ಖಾಸಗಿ ಸಹಕಾರ ಸಂಘಗಳಿಗೆ ತೋಟಗಾರಿಕೆ ಉತ್ಪನ್ನಗಳ ಮಾರುಕಟ್ಟೆಗಾಗಿ ಕೆಲ್ಪಿಸಲಾಗಿರುವ ಯೋಜನೆಗಳು ಕೆಳಕಂಡಂತಿವೆ:

1) ಹಣ್ಣು ಮತ್ತು ತರಕಾರಿ ಮಾರಾಟ ಮತ್ತು ಕೊಯ್ಲಿನ ನಂತರದ ನಿರ್ವಹಣೆಗಳಿಗಾಗಿ ಷೇರುಧನ ಸಹಾಯವನ್ನು ನೀಡಲಾಗಿದೆ.

2) ಎನ್.ಹೆಚ್.ಬಿ. ವತಿಯಿಂದ ಶೀಥಲಗೃಹ ನಿರ್ಮಾಣಕ್ಕೆ ಸಬ್ಸಿಡಿ ನೀಡಲಾಗುತ್ತಿದೆ.

3) ಕೇಂದ್ರ ಕೃಷಿ ಮಂತ್ರಾಲಯವು ಸಂಸ್ಕರಣೆಗಾಗಿ ಸಬ್ಸಿಡಿ ನೀಡುತ್ತಿದೆ.

4) APEDA ಸಂಸ್ಥೆಯು ತೋಟಗಾರಿಕೆ ರಫ್ತು ಅಭಿವೃದ್ಧಿಗಾಗಿ ವಿಶೇಷ ಯೋಜನೆಗಳನ್ನು ಹಮ್ಮಿಕೊಂಡಿದೆ.

5) ರಾಜ್ಯ ಸರ್ಕಾರವು ಶೀಥಲಗೃಹಗಳು ಬಳಸುವ ವಿದ್ಯುತ್ತಿನ ಪ್ರತಿ ಯೂನಿಟ್‌ಗೆ ರೂ. 1 ರ ಸಹಾಯಧನ ನೀಡಲಾಗುತ್ತಿದೆ.

6) ರಾಜ್ಯ ಸರ್ಕಾರವು ಬೆಂಗಳೂರಿನಲ್ಲಿ NDDA ವತಿಯಿಂದ ಬೃಹತ್ ಮಾರುಕಟ್ಟೆ ಸಂಕೀರಣವನ್ನು ಸ್ಥಾಪಿಸಲು ಉತ್ತೇಜಿಸಿ ಯೋಗ್ಯ ದರದಲ್ಲಿ ಸ್ಥಳಾವಕಾಶ ಒದಗಿಸಿ ಸ್ಟ್ಯಾಂಪ್ ಶುಲ್ಕದ ವಿನಾಯಿತಿ ನೀಡಲಾಗಿದೆ.

7) ಪ್ಲಾಸ್ಟಿಕ್ ಕ್ರೇಟುಗಳ ಬಳಕೆಯನ್ನು ಸಬ್ಸಿಡಿ ನೆರವು ಒದಗಿಸಿ ಪ್ರೋತ್ಸಾಹಿಸಲಾಗುತ್ತಿದೆ.

8) ಸಣ್ಣ ಪ್ರಮಾಣದ ಸಂಸ್ಕರಣಾ ಉದ್ದಿಮೆಗಳಿಗೆ ಖಾದಿ ಗ್ರಾಮೋದ್ಯೋಗ ಯೋಜನೆಯಡಿ ನೆರವು ದೊರಕಿಸಲಾಗಿದೆ.

9) ದ್ರಾಕ್ಷಿ ಸಹಕಾರ ಸಂಘಗಳಿಗೆ ತೋಟಗಾರಿಕೆ ಇಲಾಖಾ ವತಿಯಿಂದ ಶೀತಲಗೃಹ ಸ್ಥಾಪನೆಗೆ ಹಣಕಾಸು ನೆರವು ಒದಗಿಸಲಾಗಿದೆ.